ಊ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 281 (1) ನೇ ನಿಯಮದ ಅನುಸಾರವಾಗಿ ಈ ಸಭೆ ಖಾಸಗಿ ಸದಸ್ಯರ ವಿಧೇಯಕರ ಗಳು ಹಾಗೂ ನಿರ್ಣಯಗಳು ಸಮಿತಿಗೆ ಹತ್ತು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುವುದು.

ಏ)ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗು ನಡವಳಿಕೆಯ 288 (1) ನೇ ನಿಯಮದ ಅನುಸಾರವಾಗಿ ಈ ಸಭೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುವುದು.

ಐ)ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 288 ನೇ ನಿಯಮದ ಅನುಸಾರವಾಗಿ ಈ ಸಭೆ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾ ಯಿಸಬೇಕೆಂದು ಸೂಚಿಸುವುದು.

ಒ)ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 370 (2) ನೇ ನಿಯಮದ ಅನುಸಾರವಾಗಿ ಈ ಸಭೆ ಸದನದ ಸಮಿತಿಗೆ (ವಸತಿ ಸೌಕರ್ಯಗಳ ಸಮಿತಿ)ಗೆ ಹನ್ನೆರಡು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುವುದು.

ಉಪಾಧ್ಯಕ್ಷರು: ಮಂಡಿಸಲಾಗಿದೆ.

ಶ್ರೀ ಶಿವಾನಂದ ಪಾಟೀಲ್ ಎಸ್ (ತಿಕೋಟ):– ಸನ್ಮಾನ್ಯ ಉಪಾಧ್ಯಕ್ಷರೆ, ನಾವು ಕಳೆದ ವಾರ ಕೇಳಿದಂತಹ ಚುಕ್ಕೆ ಗುರುತಿನ ಪ್ರಶ್ನೆಗೆ ಇವತ್ತಿನೂ ಉತ್ತರ ಕೊಡಲಿಲ್ಲ.

ಉಪಾಧ್ಯಕ್ಷರು: ಮುಂದಿನ ವಾರ ಬರುತ್ತದೆ.

ಶ್ರೀ ಶಿವಾನಂದ ಪಾಟೀಲ್ ಎಸ್:– ಯಾವಾಗ ಬರುತ್ತದೆಂದು ಡೇಟ್ ಕೊಡಿ ಸಾರ್.

ಉಪಾಧ್ಯಕ್ಷರು: ಈಗ ಹತ್ತು ನಿಮಿಷ ಇದೆ.

ಶ್ರೀ ಶಿವಾನಂದ ಪಾಟೀಲ್ ಎಸ್:– 12ನೇ ತಾರೀಖಿನದೂ ಬರಲಿಲ್ಲ. 15ನೇ ತಾರೀಖಿನದೂ ಬರಲಿಲ್ಲ. ನಮ್ಮ ಪ್ರಶ್ನೆಗಳೆಲ್ಲಾ ಚುಕ್ಕೆ ಗುರುತಿನ ಪ್ರಶ್ನೆಗಳು ಆಗುತ್ತದೆ. ಅದಕ್ಕೂ ಉತ್ತರ ಕೊಡುವುದಿಲ್ಲ.

ಉಪಾಧ್ಯಕ್ಷರು:– ಆಯಿತು, ಮುಂದಿನ ವಾರ ತರಿಸೋಣ.

ಶ್ರೀ ಶಿವಾನಂದ ಪಾಟೀಲ್ ಎಸ್:– ಯಾವಾಗ ಎಂದು ಡೇಟ್ ಹೇಳಿ ಸಾರ್. ಮುಂದಿನ ವಾರ, ಮುಂದಿನ ವಾರ ಎಂದರೆ ಯಾವಾಗ ಸಾರ್?

ಉಪಾಧ್ಯಕ್ಷರು:– ಆಯಿತು ನೀವು ಮತ್ತೆ ಬರೆದು ಕೊಡಿ. ಮಾಡೋಣ.

ಗಮನ ಸೆಳೆಯುವ ಸೂಚನೆಗಳು:–

ಶ್ರೀ ಸಿ.ಎಂ.ಉದಾಸಿ:– ಸನ್ಮಾನ್ಯ ಉಪಾಧ್ಯಕ್ಷರೆ;

ಉಪಾಧ್ಯಕ್ಷರು: ಮಾನ್ಯ ಉದಾಸಿಯವರೇ, ಒಂದು ನಿಮಿಷ ಇರಿ.

ಶ್ರೀ ಎಂ.ಶ್ರೀರಾಮುಲು:– ಮಾನ್ಯ ಉಪಾಧ್ಯಕ್ಷರೆ, ಮೊನ್ನೆ ಎಪಿಎಂಸಿ ಚುನಾವಣೆಯಲ್ಲಿ ಮೊನ್ನೆ ಗೋಣೂರು ಗ್ರಾಮದಲ್ಲಿ ರೈತರ ಚುನಾವಣೆಯಲ್ಲಿ ಸಿಪಿಐ ರಾಮರಾವ್ ಎನ್ನುವವರು ಹತಾಷರಾಗಿ ರೈತರ ಮೇಲೆ ಹಲ್ಲೆ ಮಾಡಿದರು. ಹಲ್ಲೆ ಮಾಡಿ ಫೈರಿಂಗ್ ಮಾಡಿದರು. 8 ಮಂದಿ ಸಾವು ಬದುಕಿನ ಜೊತೆ ಹೋರಾಟ ನಡೆಸುತ್ತಿದ್ದಾರೆ. ಆ ಪೈಕಿ ಇಬ್ಬರು ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. 8 ಮಂದಿ ಬಳ್ಳಾರಿಯಲ್ಲಿ...

ಉಪಾಧ್ಯಕ್ಷರು:– ಮಾನ್ಯ ಶ್ರೀರಾಮುಲು ಅವರೇ ಈ ಸಬ್ಜೆಕ್ಟ್ ಈಗ ಇಲ್ಲ. ನಾಳೆಗೆ ಪ್ರಸ್ತಾಪ ಮಾಡಿ, ನಾಳೆ ಮಾತನಾಡಿ. ಈಗ ನೀರಾವರಿ ಬಗ್ಗೆ ಮಾನ್ಯ ಉದಾಸಿ ಅವರ ಕಾಲ್ ಅಟೆನ್ಷನ್ ಇದೆ.

ಗಮನ ಸೆಳೆಯುವ ಸೂಚನೆಗಳು

ವಿಷಯ: ಹಾನಗಲ್ ತಾಲೂಕಿನಲ್ಲಿ ವರದಾ ನದಿಗೆ ಅಣೆಕಟ್ಟು ಕಟ್ಟುತ್ತಿರುವುದರಿಂದ ಸಾವಿರಾರು ಜನ ನಿರಾಶ್ರಿತರಾಗುವ ಹಾಗೂ ಕೃಷಿ ಜಮೀನು ಮುಳುಗಡೆಯಾಗುವ ಬಗ್ಗೆ

ಶ್ರೀ ಸಿ.ಎಂ.ಉದಾಸಿ:– ಮಾನ್ಯ ಉಪಾಧ್ಯಕ್ಷರೆ, ಹಾನಗಲ್ ತಾಲೂಕಿನಲ್ಲಿ ವರದಾ ನದಿಗೆ ಅಣೆಕಟ್ಟು ಕಟ್ಟುತ್ತಿರುವುದರಿಂದ ಸಾವಿರಾರು ಜನ ನಿರಾಶ್ರಿತರಾಗುವ ಹಾಗೂ ಕೃಷಿ ಜಮೀನು ಮುಳುಗಡೆಯಾಗುವ ಬಗ್ಗೆ ಮಾನ್ಯ ಜಲಸಂಪನ್ಮೂಲ ಹಾಗೂ